

# ಐಪಿಎಲ್‌ನಲ್ಲಿ ಕರ್ನಾಟಕದ ಕಲರವ

ಕರುಣ್ ನಾಯರ್

**ದೇಶ, ವಿದೇಶಗಳ ದಿಗ್ಗಜ ಆಟಗಾರರ ಅಬ್ಬರದ ಸಾಧನೆಯ ನಡುವೆಯೂ ಕರ್ನಾಟಕದ ಕ್ರಿಕೆಟ್ ಕಲಿಗಳು ಐಪಿಎಲ್ ಅಂಗಳದಲ್ಲಿ ತಮ್ಮ ಛಾಪು ಮೂಡಿಸುತ್ತಿದ್ದಾರೆ.**

**■ ಪ್ರಮೋದ ಕುಲಕರ್ಣಿ**



ಪ್ರಸಿದ್ಧ ಕೃಷ್ಣ

‘ಡಿಯರ್ ಕ್ರಿಕೆಟ್, ಗಿವ್ ಮಿ ಒನ್ ಮೋರ್ ಛಾನ್ಸ್’...

2025ರ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ತಂಡದಲ್ಲಿ ಮಿಂಚುತ್ತಿರುವ ಕರ್ನಾಟಕದ ಕರುಣ್ ನಾಯರ್ ಮೂರು ವರ್ಷಗಳ ಹಿಂದೆ ಮಾಡಿದ್ದ ಹೀಗೊಂದು ಟ್ವೀಟ್ ಭಾರಿ ಸುದ್ದಿ ಮಾಡಿತ್ತು. ಈ ಟ್ವೀಟ್ ಮಾಡುವ ವೇಳೆಗಾಗಲೇ ಬಲಗೈ ಬ್ಯಾಟ್ಸ್‌ಮನ್ ಕರುಣ್ ನಾಯರ್ ದೇಶಿ ಹಾಗೂ ಅಂತರರಾಷ್ಟ್ರೀಯ ಟೂರ್ನಿಗಳಲ್ಲಿ ಹೆಸರು ಮಾಡಿದ್ದರು.

2013–14 ಹಾಗೂ 2014–15ರ ಪ್ರತಿಷ್ಠಿತ ರಣಜಿ ಟೂರ್ನಿಯಲ್ಲಿ ಕರ್ನಾಟಕ ತಂಡ ಚಾಂಪಿಯನ್ ಆಗಲು ಕರುಣ್ ಪ್ರಮುಖ ಪಾತ್ರ ವಹಿಸಿದ್ದರು. 2016ರಲ್ಲಿ ಅಂತರರಾಷ್ಟ್ರೀಯ ಟೆಸ್ಟ್ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ ಸರಣಿಯಲ್ಲಿ ಅಜೇಯ ತ್ರಿಶತಕ ಗಳಿಸಿದ್ದರು. ಅವರಿಗೆ ಆಟದ ಬದ್ಧತೆ, ಶಿಸ್ತು, ಕಠಿಣ ಪರಿಶ್ರಮ, ಅಂಗಳದಲ್ಲಿ ಮಿತಮಾತು ರೂಢಿಗತವಾಗಿಯೇ ಬಂದಿದೆ. ಕರುಣ್ ಸ್ಪರ್ಧಾತ್ಮಕ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿ ಈಗ 11 ವರ್ಷಗಳಾಗಿ ಅಪಾರ ಅನುಭವ ಗಳಿಸಿದ್ದರೂ ಐಪಿಎಲ್‌ನಲ್ಲಿ ಹಿಂದಿನ ಎರಡು ಆವೃತ್ತಿಗಳಲ್ಲಿ ಅವಕಾಶವೇ ಲಭಿಸಿರಲಿಲ್ಲ. 2013ರಲ್ಲಿ ಅವರು ಪದಾರ್ಪಣೆ ಮಾಡಿದ್ದರು. ಎಷ್ಟೇ ದೇಶೀಯ, ಅಂತರರಾಷ್ಟ್ರೀಯ ಪಂದ್ಯಗಳನ್ನು ಆಡಿದರೂ ಪ್ರತಿ ಆಟಗಾರನಿಗೆ ಐಪಿಎಲ್‌ನಲ್ಲಿ ವಿಜೃಂಭಿಸಬೇಕು ಎನ್ನುವ ತುಡಿತ ಇದ್ದೇ ಇರುತ್ತದೆ. ಜಗತ್ತಿನಾದ್ಯಂತ ಕೋಟ್ಯಂತರ ಜನ ವೀಕ್ಷಿಸುವ ಈ ಚುಟುಕು ಕ್ರಿಕೆಟ್‌ನಲ್ಲಿ ಆಡುವ ಅವಕಾಶಕ್ಕಾಗಿ ಕಾಯುತ್ತಿರುತ್ತಾರೆ. ಅದರಂತೆ ಕರುಣ್ ಹಾತೊರೆಯುತ್ತಿದ್ದರು. ಈ ಸಲದ ಐಪಿಎಲ್‌ನಲ್ಲಿ ‘ಡೆಲ್ಲಿ ಕ್ಯಾಪಿಟಲ್ಸ್’ ತಂಡ ಅವರನ್ನು ಖರೀದಿಸಿದ್ದು, ಗಮನಾರ್ಹ ಪ್ರದರ್ಶನ ತೋರುತ್ತಿದ್ದಾರೆ.

‘ಮುಂಬೈ ಇಂಡಿಯನ್ಸ್’ ವಿರುದ್ಧದ ಪಂದ್ಯದಲ್ಲಿ ಕೇವಲ 40 ಎಸೆತಗಳಲ್ಲಿ 89 ರನ್ ಗಳಿಸಿದ್ದರು. ಪಂದ್ಯದ ಫಲಿತಾಂಶ ‘ಡೆಲ್ಲಿ ಕ್ಯಾಪಿಟಲ್ಸ್’ಗೆ ನಿರಾಶಾದಾಯಕವಾಗಿದ್ದರೂ ಆ ಪಂದ್ಯದಲ್ಲಿ ಕರುಣ್ ನಾಯರ್ ತೋರಿದ ಬ್ಯಾಟಿಂಗ್, ಅವಕಾಶ ಸಿಕ್ಕರೆ ಸಾಮರ್ಥ್ಯ ತೋರಿಸಲು ಮಾಡಿಕೊಂಡಿದ್ದ ಸಿದ್ಧತೆ ಕ್ರೀಡಾಪ್ರೇಮಿಗಳ ಮನಸ್ಸು ಗೆದ್ದಿದೆ. ದೇಶಿ ಟೂರ್ನಿಗಳಲ್ಲಿ ಈಗ ವಿದರ್ಭ ತಂಡದ ಪರವಾಗಿ ಆಡುತ್ತಿರುವ ಕರುಣ್ ಒಂದೇ ಋತುವಿನಲ್ಲಿ ವಿವಿಧ ಮಾದರಿಯ ಟೂರ್ನಿಗಳಲ್ಲಿ 1870 ರನ್ ಕಲೆಹಾಕಿದ್ದಾರೆ.

‘ಡೆಲ್ಲಿ ಕ್ಯಾಪಿಟಲ್ಸ್’ ತಂಡದಲ್ಲಿರುವ ಕರ್ನಾಟಕದ ಮತ್ತೊಬ್ಬ ಆಟಗಾರ ಕೆ.ಎಲ್. ರಾಹುಲ್ ಕೂಡ ಐಪಿಎಲ್ ಟೂರ್ನಿಯ ಲೀಗ್ ಹಂತದಲ್ಲಿ ಮೊದಲರ್ಧದ ಪಂದ್ಯಗಳು ಪೂರ್ಣಗೊಂಡಾಗ ಒಟ್ಟು 323 ರನ್‌ಗಳನ್ನು ಗಳಿಸಿದ್ದರು. ಟೂರ್ನಿಯಲ್ಲಿ ತಂಡದ ಗೆಲುವಿಗೆ ಭರಪೂರ ಕಾಣಿಕೆಯನ್ನೂ ನೀಡಿದ್ದಾರೆ.

ವಿಕೆಟ್ ಕೀಪರ್ ಹಾಗೂ ಬಲಗೈ ಬ್ಯಾಟ್ಸ್‌ಮನ್ ಕೆ.ಎಲ್. ರಾಹುಲ್ 2013ರಿಂದ ಐಪಿಎಲ್ ಆಡುತ್ತಿದ್ದಾರೆ. ಕಳೆದ ವರ್ಷ ‘ಲಕ್ನೋ ಸೂಪರ್‌ಜೈಂಟ್ಸ್’ ತಂಡದ ನಾಯಕರಾಗಿದ್ದ ರಾಹುಲ್ ಬ್ಯಾಟಿಂಗ್ ಸೊಗಸಿಗೆ ಮಧ್ಯಮ ಕ್ರಮಾಂಕದಲ್ಲಿ ಈ ಸಲ ಕರುಣ್ ಕೂಡ ಜೊತೆಯಾಗಿದ್ದಾರೆ. ಈ ಜೋಡಿ ಹಿಂದೆ ದೇಶೀಯ ಟೂರ್ನಿಗಳಲ್ಲಿ ಅನೇಕ ಪಂದ್ಯಗಳಲ್ಲಿ ಬೌಲರ್‌ಗಳ ನಿದ್ದೆಗೆಡಿಸಿದೆ. 2014–15ರ ರಣಜಿ ಟೂರ್ನಿಯ